ಪ್ರಾಜಕ್ತಾ ಧಡ್ಡನೆದ್ದು ನಿಂತಳು. 'ಹೋಗು ಹನುಮಂತಪ್ಪಾ ಏನೇನೋ ಹೇಳಲಿಕ್ಕತ್ತಿ ನನಗೆ ಏನೂ ತಿಳೀವಲ್ದು' ಅಂದವಳೇ ಬ್ಯಾಗೆತ್ತಿಕೊಂಡು ಬಡಬಡನೆ ಮನೆಗೆ ಬಂದು ಬಿಟ್ಟಳು. ಮನೆ ಮುಟ್ಟಿದಾಗ ಕಂಕುಳು, ಹಣೆಯೆಲ್ಲ ಬೆವರಿನಿಂದ ತೊಯ್ದು ತಪ್ಪಡಿಯಾಗಿತ್ತು. ಗಟಗಟನೆ ಚೊಂಬೆತ್ತಿ ನೀರು ಕುಡಿದಳು. ಅವ್ವನೂ ಮನೆಯಲ್ಲಿರಲಿಲ್ಲ. ಚಿತ್ರಾಗೆ 'ನನಗೆ ಆರಾಮಿಲ್ಲ ಇವತ್ತು ಕೆಲಸಕ್ಕೆ ಬರೋದಿಲ್ಲ ಸಾರಿ ಮೇಡಂ' ಅಂತ ಸಂದೇಶ ಕಳಿಸಿ ಮೊಬೈಲೆತ್ತಿ ನೋಡಿದಳು. ದಿನದ ಡಾಟಾದಲ್ಲಿ ಇನ್ನೂ ಐವತ್ತು ಪರ್ಸೆಂಟಿನಷ್ಟಿತ್ತು. ಗೂಗಲ್ ತೆರೆದು 'ಆರ್ ಎ ಜೆ ಎ ಕೆ' ಒತ್ತಿದರೆ ಮಹಮ್ಮದ್ ರಜಾಕ್, ಫಾರೂಕ್ ರಜಾಕ್... ಹೀಗೆ ಹತ್ತು ಹನ್ನೆರಡು ರಜಾಕಗಳು ತಲೆದೋರಿದರು. 'ಆರ್ ಎ ಝಡ್ ಎ ಕೆ' ಒತ್ತಿದರೆ ಅಲ್ಲೂ ಹದಿನೈದು ಹದಿನಾರು ರಝಾಕರು ಎದ್ದು ನಿಂತರು. ಪ್ರಾಜಕ್ತಾಗೆ ಗೊಂದಲವಾಗಿ ಮೊಬೈಲ್ ಪಟ್ಟೆಂದು ಆರಿಸಿಬಿಟ್ಟಳು.

ಮನೆಯಲ್ಲಿ ಉಸಿರು ಗಟ್ಟಿದಂತಾಗಿ ಹೊರಗೆ ಬಂದಳು. ಅದೀಗ ಹರಡುತ್ತಿದ್ದ ಸೂರ್ಯನ ಬಿಸಿಲನ್ನು ಜನವರಿಯ ಕುಳಿರ್ಗಾಳಿ ತಂಪು ಮಾಡುತ್ತಿತ್ತು. ಹಳೆಯ ಕಟ್ಟಿಗೆಯ ಅಟ್ಟವನ್ನು ಕಿರ್ ಕಿರ್ ಅಂತ ಒದರಿಸುತ್ತ ಇಳಿಯುತ್ತಿದ್ದ ಪ್ರಾಜಕ್ತಾಳನ್ನೇ ದಿಟ್ಟಿಸುತ್ತಾ ಫಾತಿಮಾ ನಕ್ಕಳು. ಫಾತಿಮಾ ಬಡವಳು. ಚಾಳಿನಲ್ಲಿದ್ದ ಬಾಕಿ ಜನ ಸಿರಿವಂತರು ಅಂತಲ್ಲ; ಆದರೂ ತಿಂಗಳಿಗೆ ಇಂತಿಷ್ಟು ಅಂತ ಪಗಾರ ಎಣಿಸಿಕೊಳ್ಳುವವರು, ಇದ್ದ ಗೇಣುದ್ದದ ಮನೆಯ ಮೇಲೆ ಡಿಶ್ ಎಂಟೆನಾ ಹಾಕಿಕೊಂಡವರು; ದೊಡ್ಡಕ್ಕಿ ತಂದು ಹೊಟ್ಟೆ ತುಂಬಾ ಉಣ್ಣುವರು. ಆದರೆ ಫಾತಿಮಾ ಹಾಗಲ್ಲ, ಇವಳ ಕೊರಳಿಗೆ ಮೂರು ಮಕ್ಕಳನ್ನು ಕಟ್ಟಿ ಗಂಡ ಎತ್ತಲೋ ಓಡಿಹೋದ ಮೇಲೆ ಮನೆಯ ನಾಲ್ಕೂ ಮಂದಿ ಕೆಲಸ ಮಾಡಿದರೆ ಎರಡೊತ್ತು ಗಂಜಿ ಕುಡಿಯುವಷ್ಟು ಹಣ ಸಿಗಬೇಕು. ಮುಂಜಾನೆಯ ಹೊತ್ತು ಫಾತಿಮಾ ಮನೆಮನೆಗೆ ಬಂದು ಜೋಳ ಆರಿಸೋದು, ಖಾರ ಕುಟ್ಟಿಕೊಡೋದು ಇಂಥಾ ಕೆಲಸ ಗಂಟು ಬಿದ್ದು ಮಾಡಿ ಚೂರು ಪಾರು ಅಕ್ಕಿ, ಜೋಳ ತಗೊಂಡು ಹೋಗ್ತಾಳೆ. ಆಮೇಲೆ ಅವಳಿಗೆ ಊರಿನ ಯಾವುದೋ ಎಕ್ಸಟೆನ್ಶನ್ ಭಾಗದಲ್ಲಿ ಸಾಹೇಬರ ಮನೆಗಳ ಕಸಮುಸುರೆಯ ಕಾಯಂ ಕೆಲಸಗಳಿವೆ.

ಅಂಗೈಗೆ ತಂಬಾಕು ಹೊಸೆಯುತ್ತಾ ಇವಳನ್ನು ಕಂಡು ಫಾತಿಮಾ ಕೂಗಿದಳು.

'ಪ್ರಾಜಕ್ತಾ ನಸೀಮಾಳ ಸುದ್ದಿ ಗೊತ್ತಾಯಿತಿಲ್ಲೋ, ಅಯ್ಯ ನನಗೆಲ್ಲ ಗೊತ್ತದವ್ವ ಇವರ ಮನೀ ಕಥಿ, ನಮ್ಮಪ್ಪನ ಕಾಕೂನೂ ಬೀದರಿನಕೀನೇ. ಅದೂ ಈ ನಸೀಮಳಜ್ಜಿಯ ಊರು ಗೊರಟಾದಕೀನೇ. ಅಕೀನೇ ಅಜೀಮನ ಲಗ್ನಾ ಹೊಂದಿಸಿಕೊಟ್ಟಾಕಿ. ಈ ಕಥಿ ಅಕೀ ಬಾಯಾಕ ಎಷ್ಟು ಸಾರೆ ಕೇಳೇನೋ ಏನೋ ನಾನು? ಸುಡ್ಲಿ ರಜಾಕರು ಅಂದರೆ ಹೈದರಾಬಾದಿನ ನಿಜಾಮನ ಸೈನಿಕರಂತ. ಮುಸಲ್ಮಾನ ಆಫೀಸರನ್ನು ಯಾರೋ ಕೊಂದಿದ್ದೇ ನೆಪ ಮಾಡಿಕೊಂಡು ಸಿಕ್ಕ ಸಿಕ್ಕ ಹಿಂದೂಗಳ ಮ್ಯಾಲೆ ಅವರು ಹಲ್ಲೆ ಮಾಡಿದ್ದನ್ನು ಸ್ವತಾ ಕಣ್ಣೀಲೇ ನೋಡಿದ್ದಳಂತ ನಮ್ಮ ಕಾಕು. 'ಬೊಮ್ಮನ್ ಕೋ ಕಾಟೋ, ಬನಿಯಾ ಕೋ ಲೂಟೋ, ಸಬ್ ಬಾಟೋ' ಅಂತ ಕೂಗಿಕೋತನ ಓಣಿ ಓಣಿ ಅಡ್ಡಾಡತ್ತಿದ್ದರಂತ. ಇದಷ್ಟೇ ಅಲ್ಲ ಮಾಡಬಾರದ ಕೆಲಸಾ ಎಲ್ಲಾ ಮಾಡಿದರು. ನಸೀಮಳಜ್ಜಿ, ಅವಳ್ದೆಸರು ನೂರಾ ಅಂತೇನೋ ಇತ್ತವಾ....... ಸುಡ್ಲಿ ಅವರಿಗೆ ನೂರಾ ಆದರೇನು ರಾಧಾ ಆದರೇನು? ಪಾಪ ನುಕ್ತಾ ಲಗ್ನಾಗಿ ಬಂದ ವಧು ಅಕೀ. ಮನೆಯ ಮುಂದೆ ಅಂಗಳದಾಗ ಸಂಜೀಗೆ ಭಾಂಡಿ ತಿಕ್ಕಿಕೋತ ಕೂತಾಗ ರಜಾಕರು ಎತ್ತಿಕೊಂಡು ಹೋಗಿಬಿಟ್ಟರಂತ. ಆರು ತಿಂಗಳ ನಂತರ ಒಂದು ದಿನ ನಸುಕಿನಾಗ ಟ್ರಕ್ಕಿನಾಗ ತಂದು ಮನಿ ಮುಂದ ಚೆಲ್ಲಿ ಹೋಗಿದ್ದರಂತೆ, ಆಗ ನಾಲ್ಕು ತಿಂಗಳ ಬಸುರಿಯಂತೆ ಹುಡುಗಿ. ಅಕೀಯ ಗಂಡ 'ನಾ ಇಟ್ಕೋಳಂಗಿಲ್ಲ ಇಕೀನ್ನ' ಅಂದುಬಿಟ್ಟನಂತ.

'ಪಾಪ ಅಕಿಯದೇನು ತಪ್ಪು?' ಅಂತ ಅವಳವ್ವ ವಾದಿಸಿದಳಂತೆ.

'ಮತ್ತ ನಾನ್ಯಾವ ಪಾಪಾ ಮಾಡೇನಿ ಅಂತ ಈ ಪಾಪದ ಹೊರಿ ಸಾಕಲಿ?' ಅಂತ ಅವ ಅಂದನಂತ.

ಮುಂದೆ?

'ಮುಂದೇನು? ಅವಳ ತವರುಮನೆಯವರು ಮನಸ್ಸಿಲ್ಲದ ಮನಸ್ಸಿನಿಂದ ತಮ್ಮ ಹುಡುಗೀನ್ನ ಕರೆದೊಯ್ದರು. ಆದರೆ, ಹೇಳ್ತೀನಿ ಪಾಪಾ, ಆ ಹುಡುಗಿಯ ಜಲ್ಮ ಯಾರಿಗೂ ಬ್ಯಾಡಾಗಿ ಹೋತು ನೋಡು, ಮನೆಯ ಮಗಳನ್ನು ತೊತ್ತಿಗಿಂತ ಕೀಳಾಗಿ ಕಂಡರಂತೆ ಅವಳಣ್ಣ- ಅತ್ತಿಗಿ. ಮನೆಯ ಹಿಂದೆ ಒಂದು